## 2022–23 ನೇ ಸಾಲು

# ಸೇತುಬಂಧ–10

## ಪೂರ್ವ ಮತ್ತು ಸಾಫಲ್ಯ ಪರೀಕ್ಷೆ

## ವಿಷಯ:–ವಿಜ್ಞಾನ

# ಸರ್ಕಾರಿ ಪ್ರೌಢಶಾಲೆ ಮುರುಂಡಿ,ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

| ಕ್ರಸಂ | ಹಿಂದಿನ ತರಗತಿ ಕಲಿಕಾಫಲಗಳು ಘಟಕಾಂಶಗಳು | 10ನೇ ತರಗತಿ ಘಟಕಗಳು |
|---|---|---|
| 1 | ಸ್ಥಾಯಿ ವಿದ್ಯುತ್ ಅರ್ಥವನ್ನು ಸ್ಮರಿಸುವರು.ವಿದ್ಯುತ್ಪ್ರವಾಹದ ಅರ್ಥವನ್ನು ತಿಳಿಯುವರು.<br>ಸರಳ ವಿದ್ಯುತ್ಮಂಡಲವನ್ನು ರಚಿಸುವರು.ವಿದ್ಯುಚ್ಛಕ್ತಿಯ ವಿವಿಧ ಪರಿಣಾಮಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವರು. | ವಿದ್ಯುಚ್ಛಕ್ತಿ |
| 2 | ಶಕ್ತಿ ನಿತ್ಯತೆಯ ನಿಯಮ ನಿರೂಪಿಸುವರು ಹಾಗೂ ವಿದ್ಯುತ್ ಶಕ್ತಿಯ ಸುಲಭ ಪರಿವರ್ತನೆಯನ್ನು ಪ್ರಶಂಸಿಸುವರು. ಚಲನಶಕ್ತಿ & ಪ್ರಚ್ಛನ್ನ ಶಕ್ತಿಗಳನ್ನು ವ್ಯತ್ಯಾಸಿಸುವರು. ಉಷ್ಣಶಕ್ತಿ &ತಾಪಗಳನ್ನು ಗುರುತಿಸಿ, ವ್ಯತ್ಯಾಸಿಸುವರು. | ಶಕ್ತಿಯ ಆಕರಗಳು |
| 3 | ಬೆಳಕಿನ ಗುಣಲಕ್ಷಣಗಳನ್ನು ಅರ್ಥೈಸುವರು & ವಿಶ್ಲೇಷಿಸುವರು, ನಿಯಮಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವರು. | ಬೆಳಕು, ಪ್ರತಿಫಲನ ಮತ್ತು ವಕ್ರೀಭವನ |
| 4 | ಕಾಂತದ ಅರ್ಥವನ್ನು ಸ್ಮರಿಸುವರುಕಾಂತದ ಗುಣಗಳನ್ನು ತಿಳಿಯುವರು ಕಾಂತೀಯ ಬಲರೇಖೆಗಳನ್ನು ಎಳೆಯುವರು. | ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮಗಳು |
| 5 | ಪರಮಾಣುವಿನ ರಚನೆಯನ್ನು ಮತ್ತು ಗುಣಲಕ್ಷಣಗಳನ್ನು ವಿವರಿಸುವರು. ಧಾತುಗಳ ವೇಲೆನ್ಸಿ ಪರಾಮರ್ಶಿಸುವರು. | ಧಾತುಗಳ ಆವರ್ತನೀಯ ವರ್ಗೀಕರಣ |
| 6 | ರಾಸಾಯನಿಕ ಕ್ರಿಯೆಗಳ ವಿಧಗಳು & ಬದಲಾವಣೆಗಳನ್ನು ವರ್ಗೀಕರಿಸುವರು. | ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು |
| 7 | ರಾಸಾಯನಿಕ ಬಂಧ– ಅಯಾನಿಕ & ಸಹವೇಲೆನ್ಸಿ ಬಂಧಗಳ, ಸಂಯುಕ್ತಗಳ ಗುಣಗಳನ್ನು ಪಟ್ಟಿ ಮಾಡುವರು. | ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು ಹಾಗೂ ಕಾರ್ಬನ್ ಮತ್ತು ಅದರ ಸಂಯುಕ್ತಗಳು |
| 8 | ಲೋಹಗಳು, ಅಲೋಹಗಳು, ಭೌತ & ರಸಾಯನಿಕ ಗುಣಗಳ ಉಪಯೋಗಗಳನ್ನು ವಿವರಿಸುವರು. | ಧಾತುಗಳ ಆವರ್ತನೀಯ ವರ್ಗೀಕರಣ ಹಾಗೂ ಕಾರ್ಬನ್ ಮತ್ತು ಅದರ ಸಂಯುಕ್ತಗಳು |
| 9 | ಕೃಷಿಯನ್ನು ವೈಜ್ಞಾನಿಕವಾಗಿ ನಿರ್ವಹಿಸಲು ತಿಳಿಯುವರು. ವೈಜ್ಞಾನಿಕವಾಗಿ ಮತ್ತು ಲಾಭದಾಯಕವಾಗಿ ಕೃಷಿಯನ್ನು ನಿರ್ವಹಿಸಲು ಸಮರ್ಥರಾಗುವರು | ವಿದ್ಯಾರ್ಥಿಗಳ ಪುನರ್ಮನನಕ್ಕಾಗಿ |
| 10 | ಜೀವಕೋಶ, ಅಂಗಾಂಶಗಳ ರಚನೆ & ಕಾರ್ಯವನ್ನು ವಿವರಿಸುವರು. | ಜೀವವಿಜ್ಞಾನದ ಅಧ್ಯಾಯಗಳಿಗೆ ಮೂಲಭೂತ ಪರಿಕಲ್ಪನೆ |
| 11 | ಅನುಕೂಲಕಾರಿ & ರೋಗಕಾರಕ ಸೂಕ್ಷ್ಮಾಣುಜೀವಿಗಳ ಬಗ್ಗೆ ತಿಳಿದು ಆರೋಗ್ಯದ ಮಹತ್ವ ವಿವರಿಸುವರು.ಸೂಕ್ಷ್ಮಾಣುಜೀವಿಗಳ ಉಪಯೋಗ & ಅವುಗಳಿಂದ ಉಂಟಾಗುವ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತರಾಗುವರು ಮತ್ತು ತಡೆಗಟ್ಟುವ ಕ್ರಮಗಳನ್ನು ತಿಳಿಯುವರು.ಆರೋಗ್ಯದ ಮಹತ್ವವನ್ನು ಚರ್ಚಿಸುವರು. | ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ? |
| 12 | ಮಾನವನಲ್ಲಿ ಸಂತಾನೋತ್ಪತ್ತಿ ವಿಧಾನವನ್ನು ಅರಿತು, ಸಂತಾನೋತ್ಪತ್ತಿ ಆರೋಗ್ಯದ ಮಹತ್ವವನ್ನು ವಿವರಿಸುವರು. | ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ? |

**ಸೂಚನೆ:–ಒಂದು ಕಲಾಫಲಕ್ಕೆ 2 ಪ್ರಶ್ನೆಗಳನ್ನು ನೀಡಲಾಗಿದ್ದು,ಎರಡು ಪ್ರಶ್ನೆಗಳಿಗೆ ಉತ್ತರಿದರೆ "ಎ" ಶ್ರೇಣಿ ನೀಡುವುದು ಮತ್ತು ಒಂದು ಪ್ರಶ್ನೆಗೆ ಉತ್ತರಿದರೆ ಅಥವಾ ತಪ್ಪು ಉತ್ತರ ಅಥವಾ ಭಾಗಶಃ ಉತ್ತರಕ್ಕೆ "ಬಿ" ಶ್ರೇಣಿ ನೀಡುವುದು.**

# ಸರ್ಕಾರಿ ಪ್ರೌಢಶಾಲೆ ಮುರುಂಡಿ,ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ


## 10 ನೇ ತರಗತಿ ಸೇತುಬಂಧ ಪೂರ್ವ ಪರೀಕ್ಷೆ 2022–23

1.1.ಒಣ ತಲೆಗೂದಲಿಗೆ ಉಜ್ಜಿದ ಬಾಚಣಿಕೆಯನ್ನು ಕಾಗದ ತುಂಡಿಗೆ ಹಿಡಿದಾಗ ಅಂಟಿಕೊಳ್ಳುತ್ತವೆ.ಇಲ್ಲಿ ಯಾವ ರೀತಿಯ ವಿದ್ಯುತ್ತನ್ನು ವೀಕ್ಷಿಸಬಹುದು.?

ಉತ್ತರ:– ____________________

1.2.ಈ ಮುಂದಿನ ಚಿತ್ರದಲ್ಲಿ ಮಂಡಲ ಪೂರ್ಣಗೊಂಡಾಗ ಮೊಳೆಯಲ್ಲಿ ಉಂಟಾಗುವ ವಿದ್ಯುತ್‌ನ ಪರಿಣಾಮ

1)ರಾಸಾಯನಿಕ ಪರಿಣಾಮ 2)ಕಾಂತೀಯ ಪರಿಣಾಮ 3)ಉಷ್ಣೋತ್ಪಾದನ ಪರಿಣಾಮ 4)ಯಾವುದು ಅಲ್ಲ.




ಉತ್ತರ:– ____________________

2.1.ಶಕ್ತಿ ನಿತ್ಯತೆಯ ನಿಯಮವನ್ನು ಬರೆಯಿರಿ?

ಉತ್ತರ:– ____________________

____________________

2.2.ತಾಪವನ್ನು ನಾವು ಹೀಗೆ ಕರೆಯಬಹುದು?

ಉತ್ತರ:– ____________________

3.1.ಬೆಳಕು ಒಂದು ಮೇಲ್ಮೈ ಮೇಲೆ ಬಿದ್ದು ಹಿಂದಿರುಗಿ ಬರುವ ವಿದ್ಯಮಾನವನ್ನು ಹೀಗೆನ್ನುವರು.?

ಉತ್ತರ:– ____________________

3.2.ಹರಿಯುತ್ತಿರುವ ನೀರಿಗಿಂತ ನಿಂತ ನೀರಿನಲ್ಲಿ ನಮ್ಮ ಪ್ರತಿಬಿಂಬ ಸ್ಪಷ್ಟವಾಗಿ ಕಾಣುತ್ತದೆ ಕಾರಣ ಕೊಡಿ.

ಉತ್ತರ:– ____________________

4.1.ಕಾಂತದ ಯಾವುದಾದರೂ ಎರಡು ಗುಣಗಳನ್ನು ಬರೆಯಿರಿ?

ಉತ್ತರ:– ____________________

____________________

4.2.ಸ್ವತಂತ್ರವಾಗಿ ತೂಗುಬಿಟ್ಟ ಕಾಂತ ಯಾವ ದಿಕ್ಕಿನಲ್ಲಿ ನಿಲ್ಲುತ್ತದೆ?

ಉತ್ತರ:– ____________________

5.1.ಪರಮಾಣುವಿನ ಮೂಲಭೂತ ಕಣಗಳನನ್ನು ಹೆಸರಿಸಿ.

ಉತ್ತರ:– ____________________

5.2. ವೇಲೆನ್ಸಿ ಸೊನ್ನೆ ಇರುವ ಧಾತುಗಳನ್ನು ಹೆಸರಿಸಿ

ಉತ್ತರ:– ____________________

6.1.ಹಾಲು ಮೊಸರಾಗುತ್ತದೆ, ಬೆಣ್ಣೆ ತುಪ್ಪವಾಗುತ್ತದೆ. ಇವು ಯಾವ ರೀತಿಯ ಬದಲಾವಣೆಗಳಾಗಿವೆ.?

ಉತ್ತರ:– ____________________

6.2.ಈ ರಾಸಾಯನಿಕ ಕ್ರಿಯೆಯನ್ನು ಸಮೀಕರಣ ರೂಪದಲ್ಲಿ ಬರೆಯಿರಿ?

ಹೈಡ್ರೋಜನ್ ಆಕ್ಸಿಜನ್ ನೊಂದಿಗೆ ವರ್ತಿಸಿ ನೀರು ಉತ್ಪತ್ತಿಯಾಗುತ್ತದೆ.

ಉತ್ತರ:– ____________________

7.1.ಈ ಕೆಳಗಿನ ರಾಸಾಯನಿಕ ಕ್ರಿಯೆಯಲ್ಲಿ ಉಂಟಾಗುವ ಬಂಧವನ್ನು ಗುರ್ತಿಸಿ.

$2Na+Cl_2 \rightarrow 2NaCl$

ಉತ್ತರ:– ______________________________

7.2.ಸಹವೇಲೆನ್ಸೀಯ ಬಂಧ ಎಂದರೇನು?

ಉತ್ತರ:– ______________________________

______________________________

8.1.ಚಿನ್ನವನ್ನು ತೆಳುವಾದ ಹಾಳೆಗಳನ್ನಾಗಿ ಮತ್ತು ತಂತಿಯನ್ನಾಗಿ ಪರಿವರ್ತಿಸಬಹುದು ಇದು ಲೋಹಗಳ ಯಾವ ಗುಣ?

ಉತ್ತರ:– ______________________________

8.2.ಸೋಡಿಯಂ ಅನ್ನು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡಲು ಕಾರಣವೇನು ?

ಉತ್ತರ:– ______________________________

______________________________

9.1.ಕೃಷಿಯಲ್ಲಿ ಕೂರಿಗೆಯ ಉಪಯೋಗವೇನು?

ಉತ್ತರ:– ______________________________

9.2.ಮನೆಯಲ್ಲಿ ಸಾವಯವ ಗೊಬ್ಬರವನ್ನು ಹೇಗೆ ತಯಾರಿಸಬಹುದು?

ಉತ್ತರ:– ______________________________

______________________________

10.1.ಜೀವಕೋಶದ ಮೂರು ಮುಖ್ಯ ಭಾಗಗಳು ಯಾವುವು?

ಉತ್ತರ:– ______________________________

10.2.ದ್ರವರೂಪದ ಪ್ರಾಣಿ ಅಂಗಾಂಶ ಯಾವುದು?

ಉತ್ತರ:– ______________________________

11.1.ಕರೋನಾ ಒಂದು ಸಾಂಕ್ರಾಮಿಕ ಕಾಯಿಲೆ ಇದನ್ನು ನೀನು ಹೇಗೆ ಸಮರ್ಥಿಸುವೆ?

ಉತ್ತರ:– ______________________________

______________________________

11.2.ಚುಚ್ಚುಮದ್ದು ಮತ್ತು ಲಸಿಕೆಗಳನ್ನು ಹಾಕಿಸಿ ಕೊಳ್ಳುವುದರಿಂದಾಗುವ ಉಪಯೋಗವೇನು?

ಉತ್ತರ:– ______________________________

______________________________

12.1.ಲೈಂಗಿಕ ಸಂತಾನೋತ್ಪತ್ತಿ ಎಂದರೇನು?

ಉತ್ತರ:– ______________________________

12.2.ಹೆಣ್ಣು ಸಂತಾನೋತ್ಪತ್ತಿ ಅಂಗದ ಯಾವ ಭಾಗದಲ್ಲಿ ಭ್ರೂಣವು ನಾಟಿಕೊಳ್ಳುತ್ತದೆ?

ಉತ್ತರ:– ______________________________

# ಸರ್ಕಾರಿ ಪ್ರೌಢಶಾಲೆ ಮುರುಂಡಿ,ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## 10 ನೇ ತರಗತಿ ಸೇತುಬಂಧ ಪೂರ್ವ ಪರೀಕ್ಷೆ 2022-23


==========================================

## ಉತ್ತರ ಕೀಲಿ

1.1.ಒಣ ತಲೆಗೂದಲಿಗೆ ಉಜ್ಜಿದ ಬಾಚಣಿಕೆಯನ್ನು ಕಾಗದ ತುಂಡಿಗೆ ಹಿಡಿದಾಗ ಅಂಟಿಕೊಳ್ಳುತ್ತವೆ.ಇಲ್ಲಿ ಯಾವ ರೀತಿಯ ವಿದ್ಯುತ್ತನ್ನು ವೀಕ್ಷಿಸಬಹುದು.?

ಉತ್ತರ:- ಸ್ಥಾಯಿ ವಿದ್ಯುತ್

1.2.ಈ ಮುಂದಿನ ಚಿತ್ರದಲ್ಲಿ ಮಂಡಲ ಪೂರ್ಣಗೊಂಡಾಗ ಮೊಳೆಯಲ್ಲಿ ಉಂಟಾಗುವ ವಿದ್ಯುತ್‌ನ ಪರಿಣಾಮ 1)ರಾಸಾಯನಿಕ ಪರಿಣಾಮ 2)ಕಾಂತೀಯ ಪರಿಣಾಮ 3)ಉಷ್ಣೋತ್ಪಾದನ ಪರಿಣಾಮ 4)ಯಾವುದು ಅಲ್ಲ.




ಉತ್ತರ:- 2)ಕಾಂತೀಯ ಪರಿಣಾಮ

2.1.ಶಕ್ತಿ ನಿತ್ಯತೆಯ ನಿಯಮವನ್ನು ಬರೆಯಿರಿ?

ಉತ್ತರ:- ನಾವು ಶಕ್ತಿಯನ್ನು ಸೃಷ್ಟಿಸಲು ಸಾಧ್ಯವಿಲ್ಲ ಮತ್ತು ನಾಶಗೊಳಿಸಲು ಸಾಧ್ಯವಿಲ್ಲ. ಅದನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಪರಿವರ್ತಿಸಬಹುದು.

2.2.ತಾಪವನ್ನು ನಾವು ಹೀಗೆ ಕರೆಯಬಹುದು?

ಉತ್ತರ:- ವಸ್ತುವಿನ ಉಷ್ಣತೆಯ ಮಟ್ಟದ ಅಳತೆಯೇ ತಾಪ

3.1.ಬೆಳಕು ಒಂದು ಮೇಲ್ಮೈ ಮೇಲೆ ಬಿದ್ದು ಹಿಂದಿರುಗಿ ಬರುವ ವಿದ್ಯಮಾನವನ್ನು ಹೀಗೆನ್ನುವರು.?

ಉತ್ತರ:- ಬೆಳಕಿನ ಪ್ರತಿಫಲನ

3.2.ಹರಿಯುತ್ತಿರುವ ನೀರಿಗಿಂತ ನಿಂತ ನೀರಿನಲ್ಲಿ ನಮ್ಮ ಪ್ರತಿಬಿಂಬ ಸ್ಪಷ್ಟವಾಗಿ ಕಾಣುತ್ತದೆ ಕಾರಣ ಕೊಡಿ.

ಉತ್ತರ:- ನಿಯತ ಪ್ರತಿಫಲನದ ಕಾರಣದಿಂದ

4.1.ಕಾಂತದ ಯಾವುದಾದರೂ ಎರಡು ಗುಣಗಳನ್ನು ಬರೆಯಿರಿ?

ಉತ್ತರ:- ಕಾಂತವು ಕಬ್ಬಿಣದಂತಹ ವಸ್ತುಗಳನ್ನು ಆಕರ್ಷಿಸುತ್ತದೆ.

ಸ್ವತಂತ್ರವಾಗಿ ತೂಗುಬಿಟ್ಟ ಕಾಂತ ಉತ್ತರ - ದಕ್ಷಿಣವಾಗಿ ನಿಲ್ಲುತ್ತದೆ.

4.2.ಸ್ವತಂತ್ರವಾಗಿ ತೂಗುಬಿಟ್ಟ ಕಾಂತ ಯಾವ ದಿಕ್ಕಿನಲ್ಲಿ ನಿಲ್ಲುತ್ತದೆ?

ಉತ್ತರ:- ಉತ್ತರ ಮತ್ತು ದಕ್ಷಿಣ

5.1.ಪರಮಾಣುವಿನ ಮೂಲಭೂತ ಕಣಗಳನನ್ನು ಹೆಸರಿಸಿ.

ಉತ್ತರ:- ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್

5.2.ವೇಲೆನ್ಸಿ ಸೊನ್ನೆ ಇರುವ ಧಾತುಗಳನ್ನು ಹೆಸರಿಸಿ

ಉತ್ತರ:- ಜಡಾ ಅನಿಗಳ ಸರಣಿ ಅಥವಾ 0 ಗುಂಪಿನ ಧಾತುಗಳು.

6.1.ಹಾಲು ಮೊಸರಾಗುತ್ತದೆ, ಬೆಣ್ಣೆ ತುಪ್ಪವಾಗುತ್ತದೆ. ಇವು ಯಾವ ರೀತಿಯ ಬದಲಾವಣೆಗಳಾಗಿವೆ.?

ಉತ್ತರ:- ರಾಸಾಯನಿಕ ಬದಲಾವಣೆ

6.2.ಈ ರಾಸಾಯನಿಕ ಕ್ರಿಯೆಯನ್ನು ಸಮೀಕರಣ ರೂಪದಲ್ಲಿ ಬರೆಯಿರಿ?

ಹೈಡ್ರೋಜನ್ ಆಕ್ಸಿಜನ್ ನೊಂದಿಗೆ ವರ್ತಿಸಿ ನೀರು ಉತ್ಪತ್ತಿಯಾಗುತ್ತದೆ.

ಉತ್ತರ:- $2H_2 + O_2 \rightarrow 2H_2O$

7.1.ಈ ಕೆಳಗಿನ ರಾಸಾಯನಿಕ ಕ್ರಿಯೆಯಲ್ಲಿ ಉಂಟಾಗುವ ಬಂಧವನ್ನು ಗುರ್ತಿಸಿ.

$2Na+Cl_2 \rightarrow 2NaCl$

ಉತ್ತರ:– ಅಯಾನಿಕ್ ಬಂಧ

7.2.ಸಹವೇಲೆನ್ಸೀಯ ಬಂಧ ಎಂದರೇನು?

ಉತ್ತರ:– ಎಲೆಕ್ಟ್ರಾನಗಳ ಪರಸ್ಪರ ಹಂಚಿಕೆಯಿಂದ ಉಂಟಾಗುವ ಬಂಧವನ್ನು ಸಹವೇಲೆನ್ಸೀಯ ಬಂಧ ಎನ್ನುವರು.

8.1.ಚಿನ್ನವನ್ನು ತೆಳುವಾದ ಹಾಳೆಗಳನ್ನಾಗಿ ಮತ್ತು ತಂತಿಯನ್ನಾಗಿ ಪರಿವರ್ತಿಸಬಹುದು ಇದು ಲೋಹಗಳ ಯಾವ ಗುಣ?

ಉತ್ತರ:– ಕುಟ್ಯತೆ ಮತ್ತು ತನ್ಯತೆ

8.2.ಸೋಡಿಯಂ ಅನ್ನು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡಲು ಕಾರಣವೇನು ?

ಉತ್ತರ:– ಸೋಡಿಯಂ ಬಹಳ ಕ್ರಿಯಾಶೀಲ ಧಾತು, ವಾತಾವರಣದ ತೇವಾಂಶದೊಂದಿಗೆ ಬಹು ಬೇಗ ವರ್ತಿಸುತ್ತದೆ

9.1.ಕೃಷಿಯಲ್ಲಿ ಕೂರಿಗೆಯ ಉಪಯೋಗವೇನು?

ಉತ್ತರ:– ಬೀಜಗಳ ಬಿತ್ತನೆಯಲ್ಲಿ

9.2.ಮನೆಯಲ್ಲಿ ಸಾವಯವ ಗೊಬ್ಬರವನ್ನು ಹೇಗೆ ತಯಾರಿಸಬಹುದು?

ಉತ್ತರ:– ಮನೆಯಲ್ಲಿ ಸಿಗುವ ತರಕಾರಿ ಸಿಪ್ಪೆ ಮತ್ತು ಹಣ್ಣಿನ ಹಸಿ ಸಸ್ಯ ಮತ್ತು ಪ್ರಾಣಿ ತ್ಯಾಜ್ಯಗಳನ್ನು ಒಂದು ಗುಂಡಿಯಲ್ಲಿ ಕೊಳೆಸಿ ಸಾವಯವ ಗೊಬ್ಬರ ತಯಾರಿಸಬಹುದು.

10.1.ಜೀವಕೋಶದ ಮೂರು ಮುಖ್ಯ ಭಾಗಗಳು ಯಾವುವು?

ಉತ್ತರ:– ಕೋಶಪೊರೆ,ಕೋಶಕೇಂದ್ರ, ಕೋಶದ್ರವ್ಯ.

10.2.ದ್ರವರೂಪದ ಪ್ರಾಣಿ ಅಂಗಾಂಶ ಯಾವುದು?

ಉತ್ತರ:– ರಕ್ತ

11.1.ಕರೋನಾ ಒಂದು ಸಾಂಕ್ರಾಮಿಕ ಕಾಯಿಲೆ ಇದನ್ನು ನೀನು ಹೇಗೆ ಸಮರ್ಥಿಸುವೆ?

ಉತ್ತರ:– ಕರೋನಾ ಸೊಂಕು ಒಬ್ಬರಿಂದ ಒಬ್ಬರಿಗೆ ಸಂಪರ್ಕದಿಂದ ಸುಲಭವಾಗಿ ಹರಡುತ್ತದೆ.

11.2.ಚುಚ್ಚುಮದ್ದು ಮತ್ತು ಲಸಿಕೆಗಳನ್ನು ಹಾಕಿಸಿ ಕೊಳ್ಳುವುದರಿಂದಾಗುವ ಉಪಯೋಗವೇನು?

ಉತ್ತರ:– ರೋಗಗಳು ಬಾರದಂತೆ ಮುನ್ನೆಚ್ಚರಿಕೆ ವಹಿಸಬಹುದು.ಮತ್ತು ರೋಗದ ವಿರುದ್ದ ಸೂಕ್ತ ಪ್ರತಿರೋಧಕವನ್ನು ಉಂಟುಮಾಡುತ್ತವೆ.

12.1.ಲೈಂಗಿಕ ಸಂತಾನೋತ್ಪತ್ತಿ ಎಂದರೇನು?

ಉತ್ತರ:– ಗಂಡು ಮತ್ತು ಹೆಣ್ಣು ಲಿಂಗಾಣುಗಳ ಸಂಯೋಗದಿಂದ ನಡೆಯುವ ಸಂತಾನೋತ್ಪತ್ತಿ.

12.2.ಹೆಣ್ಣು ಸಂತಾನೋತ್ಪತ್ತಿ ಅಂಗದ ಯಾವ ಭಾಗದಲ್ಲಿ ಭ್ರೂಣವು ನಾಟಿಕೊಳ್ಳುತ್ತದೆ?

ಉತ್ತರ:– ಗರ್ಭಾಶಯ

# ಸರ್ಕಾರಿ ಪ್ರೌಢಶಾಲೆ ಮುರುಂಡಿ,ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## 10 ನೇ ತರಗತಿ ಸೇತುಬಂಧ ಸಾಫಲ್ಯ ಪರೀಕ್ಷೆ 2022–23

==========================================

1.1.ಸರಳ ವಿದ್ಯುತ್ ಮಂಡಲ ರಚಿಸಲು ನೀನು ಯಾವ ವಸ್ತುಗಳನ್ನು ಬಳಸುವೆ?

ಉತ್ತರ:– ____________________________________________

1.2.ನಿಮ್ಮ ಮನೆಯಲ್ಲಿ ಬಳಸುವ ಇಸ್ತ್ರಿಪೆಟ್ಟಿಗೆ ಯಾವ ಪರಿಣಾಮ ಆಧರಿಸಿ ಕಾರ್ಯ ನಿರ್ವಹಿಸುತ್ತದೆ.

ಉತ್ತರ:– ____________________________________________

2.1.ಸೌರ ಕೋಶದಲ್ಲಿ ಶಕ್ತಿಯ ಪರಿವರ್ತನೆಯನ್ನು ಬರೆಯಿರಿ?

ಉತ್ತರ:– ____________________________________________

2.2.ಅಣೆಕಟ್ಟುಗಳಲ್ಲಿ ಸಂಗ್ರಹಿಸಿರುವ ನೀರು ಇದು ಯಾವ ಶಕ್ತಿಯ ವಿಧವಾಗಿದೆ?

ಉತ್ತರ:– ____________________________________________

3.1.ನೀರು ತುಂಬಿದ ಗಾಜಿನ ಲೋಟದಲ್ಲಿ ಇಟ್ಟ ನಾಣ್ಯವು ಮೇಲೆ ಬಂದಂತೆ ಕಾಣುತ್ತದೆ ಇದು ಬೆಳಕಿನ ಯಾವ ಪರಿಣಾಮ

ಉತ್ತರ:– ____________________________________________

3.2.ಬೆಳಕಿನ ಪ್ರತಿಫಲನದ ಎರಡು ನಿಯಮಗಳನ್ನು ಬರೆಯಿರಿ.


ಉತ್ತರ:– ____________________________________________

______________________________________________________

4.1.ಕಾಂತೀಯ ವಸ್ತುಗಳಿಗೆ ಉದಾಹರಣೆಕೊಡಿ.

ಉತ್ತರ:– ____________________________________________

4.2.ಈ ಕೆಳಗಿನ ಚಿತ್ರದಲ್ಲಿ ಕಾಂತಿಯ ಬಲ ರೇಖೆಗಳು ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಚಲಿಸುತ್ತಿವೆ.




ಉತ್ತರ:– ____________________________________________

5.1.ಪರಮಾಣು ಸಂಖ್ಯೆಯನ್ನು ನಿರ್ಧರಿಸುವ ಪರಮಾಣುವಿನ ಮೂಲಭೂತ ಕಣ ಯಾವುದು?

ಉತ್ತರ:– ____________________________________________

5.2. ಆಮ್ಲಜನಕದ ಎಲೆಕ್ಟ್ರಾನ್ ವಿನ್ಯಾಸ ಬರೆಯಿರಿ.

ಉತ್ತರ:– ____________________________________________


6.1.ರಾಸಾಯನಿಕ ಕ್ರಿಯೆ ಯಾವುದಾದರೂ ಎರಡು ವಿಧಗಳನ್ನು ಬರೆಯಿರಿ?

ಉತ್ತರ:– ____________________________________________

6.2.ಮಂಜುಗಡ್ಡೆಯನ್ನು ಕಾಯಿಸಿ ಕುದಿಸಲಾಗಿದೆ, ಇಲ್ಲಿ ಯಾವ ಬದಲಾವಣೆಯನ್ನು ಗಮನಿಸಬಹುದು?

ಉತ್ತರ:– ____________________________________________

7.1.ಈ ಮುಂದಿನ ಚಿತ್ರವು ಯಾವ ಬಂಧವನ್ನು ಸೂಚಿಸುತ್ತದೆ.



ಉತ್ತರ:– ______________________________________________

7.2.ಅಯಾನಿಕ್ ಸಂಯುಕ್ತಗಳ ಎರಡು ಲಕ್ಷಣಗಳನ್ನು ಬರೆಯಿರಿ.

ಉತ್ತರ:– ______________________________________________

______________________________________________

8.1.ಲೋಹಗಳ ಯಾವುದಾದರೂ ಎರಡು ಭೌತ ಗುಣಗಳನ್ನು ಬರೆಯಿರಿ.

ಉತ್ತರ:– ______________________________________________

______________________________________________

8.2.ಕಬ್ಬಿಣ ಮತ್ತು ರಂಜಕದ ಒಂದೊಂದು ಉಪಯೋಗವನ್ನು ಬರೆಯಿರಿ.

ಉತ್ತರ:– ______________________________________________

______________________________________________

9.1.ಸಾವಯವ ಗೊಬ್ಬರ ಬಳಸುವುರಿಂದ ಆಗುವ ಉಪಯೋಗವೇನು?.

ಉತ್ತರ:– ______________________________________________

______________________________________________

9.2.ವೈಜ್ಞಾನಿಕವಾಗಿ ಮತ್ತು ಲಾಭದಾಯಕವಾಗಿ ಕೃಷಿಯನ್ನು ಮಾಡಲು ರೈತರಿಗೆ ನೆರವಾಗುವ ಕೇಂದ್ರಗಳು ಯಾವುವು? ಕೃಷಿಯ ಮುಖ್ಯ ಹಂತಗಳು ಯಾವುವು?

ಉತ್ತರ:– ______________________________________________

______________________________________________

10.1.ಕ್ಸೈಲಂ ಮತ್ತು ಫ್ಲೋಯಂಗಳ ಒಂದೊಂದು ಕಾರ್ಯವನ್ನು ಬರೆಯಿರಿ?

ಉತ್ತರ:– ______________________________________________

______________________________________________

10.2.ಸೂಕ್ಷ್ಮಜೀವಿಗಳ ಎರಡು ಉಪಯೋಗಗಳನ್ನು ಬರೆಯಿರಿ?

ಉತ್ತರ:– ______________________________________________

______________________________________________

11.1.ನೀನು ಗಮನಿಸಿರುವ ಸಾಂಕ್ರಾಮಿಕ ರೋಗಗಳನ್ನು ಹೆಸರಿಸು?

ಉತ್ತರ:– ______________________________________________

______________________________________________

11.2.ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಎರಡು ವಿಧಾನಗಳನ್ನು ಬರೆಯಿರಿ ?

ಉತ್ತರ:– ______________________________________________

______________________________________________

12.1.ಆಂತರಿಕ ನಿಷೇಚನವು ಸಂಭವಿಸುವ ಜಾಗ

1.ಹೆಣ್ಣಿನ ದೇಹದೊಳಗೆ 2.ಹೆಣ್ಣಿನ ದೇಹದ ಹೊರೆಗೆ 3.ಗಂಡಿನ ದೇಹದೊಳಗೆ 4.ಗಂಡಿನ ದೇಹದಹೊರೆಗೆ

ಉತ್ತರ:– ______________________________________________

12.2.ಯುಗ್ಮಜದಲ್ಲಿ ಕಂಡುಬರುವ ಕೋಶಕೇಂದ್ರಗಳ ಸಂಖ್ಯೆ ಎಷ್ಟು?

ಉತ್ತರ:– ______________________________________________

# ಸರ್ಕಾರಿ ಪ್ರೌಢಶಾಲೆ ಮುರುಂಡಿ,ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## 10 ನೇ ತರಗತಿ ಸೇತುಬಂಧ ಸಾಫಲ್ಯ ಪರೀಕ್ಷೆ 2022–23

=========================================

## ಉತ್ತರ ಕೀಲಿ

1.1.ಸರಳ ವಿದ್ಯುತ್ ಮಂಡಲ ರಚಿಸಲು ನೀನು ಯಾವ ವಸ್ತುಗಳನ್ನು ಬಳಸುವೆ?

ಉತ್ತರ:– ವಾಹಕ ತಂತಿ,ಶುಷ್ಕಕೋಶ,ಬಲ್ಬ್,ಸ್ವಿಚ್

1.2.ನಿಮ್ಮ ಮನೆಯಲ್ಲಿ ಬಳಸುವ ಇಸ್ತ್ರಿಪೆಟ್ಟಿಗೆ ಯಾವ ಪರಿಣಾಮ ಆಧರಿಸಿ ಕಾರ್ಯ ನಿರ್ವಹಿಸುತ್ತದೆ.

ಉತ್ತರ:– ವಿದ್ಯುತ್ತಿನ ಉಷ್ಣೋತ್ಪಾದನಾ ಪರಿಣಾಮ.

2.1.ಸೌರ ಕೋಶದಲ್ಲಿ ಶಕ್ತಿಯ ಪರಿವರ್ತನೆಯನ್ನು ಬರೆಯಿರಿ?

ಉತ್ತರ:– ಸೌರಶಕ್ತಿಯು ವಿದ್ಯುತ್ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ.

2.2.ಅಣೆಕಟ್ಟುಗಳಲ್ಲಿ ಸಂಗ್ರಹಿಸಿರುವ ನೀರು ಇದು ಯಾವ ಶಕ್ತಿಯ ವಿಧವಾಗಿದೆ?

ಉತ್ತರ:– ಪ್ರಚ್ಛನ್ನಶಕ್ತಿ

3.1.ನೀರು ತುಂಬಿದ ಗಾಜಿನ ಲೋಟದಲ್ಲಿ ಇಟ್ಟ ನಾಣ್ಯವು ಮೇಲೆ ಬಂದಂತೆ ಕಾಣುತ್ತದೆ ಇದು ಬೆಳಕಿನ ಯಾವ ಪರಿಣಾಮ

ಉತ್ತರ:– ಬೆಳಕಿನ ವಕ್ರೀಭವನ

3.2.ಬೆಳಕಿನ ಪ್ರತಿಫಲನದ ಎರಡು ನಿಯಮಗಳನ್ನು ಬರೆಯಿರಿ.


ಉತ್ತರ:– 1.ಪತನಕೋನವು ಪ್ರತಿಫಲಿತ ಕೋನಕ್ಕೆ ಸಮನಾಗಿರುತ್ತದೆ.

2.ಪತನಕಿರಣ, ಪ್ರತಿಫಲಿತ ಕಿರಣ ಮತ್ತು ಪತನಬಿಂದುವಿನಲ್ಲಿ ಎಳೆದ ಲಂಬ ಈ ಮೂರು ಒಂದೇ ಸಮತಲದಲ್ಲಿರುತ್ತವೆ.

4.1.ಕಾಂತೀಯ ವಸ್ತುಗಳಿಗೆ ಉದಾಹರಣೆಕೊಡಿ.

ಉತ್ತರ:– ಕಬ್ಬಿಣ, ನಿಕ್ಕಲ್

4.2.ಈ ಕೆಳಗಿನ ಚಿತ್ರದಲ್ಲಿ ಕಾಂತಿಯ ಬಲ ರೇಖೆಗಳು ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಚಲಿಸುತ್ತಿವೆ.



ಉತ್ತರ:– ಉತ್ತರ ದಿಂದ ದಕ್ಷಿಣದ ಕಡೆಗೆ

5.1.ಪರಮಾಣು ಸಂಖ್ಯೆಯನ್ನು ನಿರ್ಧರಿಸುವ ಪರಮಾಣುವಿನ ಮೂಲಭೂತ ಕಣ ಯಾವುದು?

ಉತ್ತರ:–ಪ್ರೋಟಾನ್

5.2.ಆಮ್ಲಜನಕದ ಎಲೆಕ್ಟ್ರಾನ್ ವಿನ್ಯಾಸ ಬರೆಯಿರಿ.

ಉತ್ತರ:–


6.1.ರಾಸಾಯನಿಕ ಕ್ರಿಯೆ ಯಾವುದಾದರೂ ಎರಡು ವಿಧಗಳನ್ನು ಬರೆಯಿರಿ?

ಉತ್ತರ:– ಸಂಯೋಗ ,ಸ್ಥಾನಪಲ್ಲಟ, ರಾಸಾಯನಿಕ ವಿಭಜನೆ

6.2.ಮಂಜುಗಡ್ಡೆಯನ್ನು ಕಾಯಿಸಿ ಕುದಿಸಲಾಗಿದೆ, ಇಲ್ಲಿ ಯಾವ ಬದಲಾವಣೆಯನ್ನು ಗಮನಿಸಬಹುದು?

ಉತ್ತರ:– ಭೌತ ಬದಲಾವಣೆ

7.1.ಈ ಮುಂದಿನ ಚಿತ್ರವು ಯಾವ ಬಂಧವನ್ನು ಸೂಚಿಸುತ್ತದೆ.




ಉತರ:– ಸಹವೇಲೆನೀಯ ಬಂದ

7.2.ಅಯಾನಿಕ್ ಸಂಯುಕ್ತಗಳ ಎರಡು ಲಕ್ಷಣಗಳನ್ನು ಬರೆಯಿರಿ.

ಉತ್ತರ:– ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ.

8.1.ಲೋಹಗಳ ಯಾವುದಾದರೂ ಎರಡು ಭೌತ ಗುಣಗಳನ್ನು ಬರೆಯಿರಿ.

ಉತ್ತರ:– ಕುಟ್ಯತೆ ಮತ್ತು ತನ್ಯತೆ, ಶಾಬ್ಧನ, ಹೊಳಪು, ಸಾಮಾನ್ಯವಾಗಿ ಉತ್ತಮ ವಿದ್ಯುತ್ ಮತ್ತು ಉಷ್ಣವಾಹಕಗಳು.

8.2.ಕಬ್ಬಿಣ ಮತ್ತು ರಂಜಕದ ಒಂದೊಂದು ಉಪಯೋಗವನ್ನು ಬರೆಯಿರಿ.

ಉತ್ತರ:– ಕಬ್ಬಿಣ– ತಂತಿ ಮತ್ತು ತಗಡುಗಳ ತಯಾರಿಕೆಯಲ್ಲಿ ಇತ್ಯಾದಿ.

ರಂಜಕ– ಬೆಂಕಿಕಡ್ಡಿಯ ಮದ್ದು ತಯಾರಿಕೆಯಲ್ಲಿ

9.1.ಸಾವಯವ ಗೊಬ್ಬರ ಬಳಸುವುರಿಂದ ಆಗುವ ಉಪಯೋಗವೇನು?.

ಉತ್ತರ:– ಸಾವಯವ ಗೊಬ್ಬರದಿಂದ ಬೆಳೆದ ಬೆಳೆಗಳು ಕಲುಷಿತವಾಗಿರುವುದಿಲ್ಲ ಮತ್ತು ಉತ್ತಮ ಆರೋಗ್ಯಕ್ಕೆ ಉಪಯೋಗಕಾರಿ.

9.2.ವೈಜ್ಞಾನಿಕವಾಗಿ ಮತ್ತು ಲಾಭದಾಯಕವಾಗಿ ಕೃಷಿಯನ್ನು ಮಾಡಲು ರೈತರಿಗೆ ನೆರವಾಗುವ ಕೇಂದ್ರಗಳು ಯಾವುವು? ಕೃಷಿಯ ಮುಖ್ಯ ಹಂತಗಳು ಯಾವುವು?

ಉತ್ತರ:– ರೈತ ಸಂಪರ್ಕ ಕೇಂದ್ರ/ ಮಣ್ಣು ಪರೀಕ್ಷಾ ಕೇಂದ್ರ /ಪಶುಸಂಗೋಪನಾ ಕೇಂದ್ರ/ ತಳಿ ಸುಧಾರಣ ಕೇಂದ್ರ

10.1.ಕ್ಸೈಲಂ ಮತ್ತು ಫ್ಲೋಯಂಗಳ ಒಂದೊಂದು ಕಾರ್ಯವನ್ನು ಬರೆಯಿರಿ?

ಉತ್ತರ:– ಕ್ಸೈಲಂ – ಸಸ್ಯಗಳಲ್ಲಿ ನೀರನ್ನು ಬೇರಿನಿಂದ ಇತರೆಭಾಗಗಳಿಗೆ ಸಾಗಿಸುತ್ತದೆ.

ಫ್ಲೋಯಂ – ಸಸ್ಯಗಳಲ್ಲಿ ಎಲೆಗಳಲ್ಲಿ ತಯಾರಾದ ಆಹಾರವನ್ನು ಸಸ್ಯದ ಇತರೆ ಭಾಗಗಳಿಗೆ ಸಾಗಿಸುತ್ತದೆ.

10.2.ಸೂಕ್ಷ್ಮಜೀವಿಗಳ ಎರಡು ಉಪಯೋಗಗಳನ್ನು ಬರೆಯಿರಿ?

ಉತ್ತರ:– ಹಾಲು ಮೊಸರಾಗಲು ಮತ್ತು ಸಾವಯವ ವಸ್ತುಗಳನ್ನು ಕೊಳೆಸಲು ಸಹಾಯಮಾಡುತ್ತವೆ.

11.1.ನೀನು ಗಮನಿಸಿರುವ ಸಾಂಕ್ರಾಮಿಕ ರೋಗಗಳನ್ನು ಹೆಸರಿಸು?

ಉತ್ತರ:– ಸಾಮಾನ್ಯ ಶೀತ, ಕಾಲರಾ

11.2.ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಎರಡು ವಿಧಾನಗಳನ್ನು ಬರೆಯಿರಿ ?

ಉತ್ತರ:– ಸಾಧ್ಯವಾದಷ್ಟು ಸೊಂಕಿತರಿಂದ ಅಂತರ ಕಾಯುಕೊಳ್ಳುವುದು. ಮತ್ತು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು.

12.1.ಆಂತರಿಕ ನಿಷೇಚನವು ಸಂಭವಿಸುವ ಜಾಗ

1.ಹೆಣ್ಣಿನ ದೇಹದೊಳಗೆ 2.ಹೆಣ್ಣಿನ ದೇಹದ ಹೊರೆಗೆ 3.ಗಂಡಿನ ದೇಹದೊಳಗೆ 4.ಗಂಡಿನ ದೇಹದಹೊರೆಗೆ

ಉತ್ತರ:– 1.ಹೆಣ್ಣಿನ ದೇಹದೊಳಗೆ

12.2.ಯುಗ್ಮಜದಲ್ಲಿ ಕಂಡುಬರುವ ಕೋಶಕೇಂದ್ರಗಳ ಸಂಖ್ಯೆ ಎಷ್ಟು?

ಉತ್ತರ:– 2